ಬಸ್ ನಿಲ್ದಾಣದಲ್ಲಿ ಸ್ವಚ್ಛತಾ ಅಭಿಯಾನ

ಬೈಲಹೊಂಗಲ: ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ಸ್ವಯಂಸೇವಕ ವಿದ್ಯಾರ್ಥಿಗಳು ನಗರದ ಅನಿಗೋಳ ರಸ್ತೆಯ ಹಳೆಯ ಬಸ್ ನಿಲ್ದಾಣದಲ್ಲಿ ಸ್ವಚ್ಛತಾ ಅಭಿಯಾನ ನಡೆಸಿದರು. ಬಸ್ ನಿಲ್ದಾಣದಲ್ಲಿ ಬಿದ್ದಿದ್ದ ತ್ಯಾಜ್ಯ ಸಂಗ್ರಹಿಸಿ, ಹಸಿ ಕಸ ಹಾಗೂ ಒಣ ಕಸ ಪ್ರತ್ಯೇಕವಾಗಿ ವಿಂಗಡಿಸಿ ನಗರಸಭೆಯ ಕಸ ವಿಲೇವಾರಿ ವಾಹನದ ಮೂಲಕ ಸೂಕ್ತವಾಗಿ ವಿಲೇವಾರಿಗೊಳಿಸಿದರು.

ಸ್ವಚ್ಛತಾ ಕಾರ್ಯದ ಮೂಲಕ ವಿದ್ಯಾರ್ಥಿಗಳು ಸಾರ್ವಜನಿಕ ಸ್ಥಳ ಸ್ವಚ್ಛವಾಗಿಡುವ ಅಗತ್ಯತೆ ಹಾಗೂ ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದ ಉಸ್ತುವಾರಿಯನ್ನು ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಮಹಾಂತೇಶ ಘೋಡಗೇರಿ ವಹಿಸಿದ್ದರು. ಕಾಲೇಜಿನ ಪ್ರಾಚಾರ್ಯ ಎನ್.ಎಂ. ಕುದುರಿಮೋತಿ, ಹಿರಿಯ ಉಪನ್ಯಾಸಕರಾದ ಬಿ.ಸಿ. ಅಡಕಿ ಹಾಗೂ ಆರ್.ಬಿ. ಹುನಗುಂದ ಉಪಸ್ಥಿತರಿದ್ದು, ವಿದ್ಯಾರ್ಥಿಗಳ ಸಮಾಜಮುಖಿ ಕಾರ್ಯ ಶ್ಲಾಘಿಸಿ ಇದೇ ರೀತಿಯ ಸೇವಾ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳುವಂತೆ ಕರೆ ನೀಡಿದರು.

ಬ್ಯಾಂಕ್ ಆಫ್ ಬರೋಡ
ಸ್ಥಾಪನೆಕ ಕಛೇರಿ ಒತ್ತಡಕ್ಕೊಳಪಟ್ಟ ಸ್ವತ್ತುಗಳ ರಿಕವರಿ ಶಾಖೆ, ಹುಬ್ಬಳ್ಳಿ, 2ನೇ ಮಹಡಿ, ಬೆಳ್ಳದ ಟಿವರ್, ಬನ್ನಿಗಿಡ ಸ್ಕ್ವಾಸ್, ಗೋಕುಲ ರಸ್ತೆ, ಹುಬ್ಬಳ್ಳಿ-580030, ಕರ್ನಾಟಕ
ಇ-ಮೇಲ್: sarhub@bankofbaroda.com
ತಿದ್ದುಪಡಿ
ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ದಿ.07.08.2026ರಂದು ಈ ಸುದ್ದಿ ಪತ್ರಿಕೆಯಲ್ಲಿ ಬೆಳಗಾವಿ ಆವೃತ್ತಿದಲ್ಲಿ ಪ್ರಕಟಿಸಲಾದ ಶ್ರೀ ಪ್ರಸಾದ್ ಆನಂದ್ ಕುಲಕರ್ಣಿ (ಸಾಲಗಾರರು) ಮೂಲಕ ನೀಡಿರುವ ನಮ್ಮ ಮಾರಾಟ ಸೂಚನೆಯನ್ನು ನೋಡಿ, ಅದನ್ನು ಮಾರಾಟ ಸೂಚನೆ ದಿನಾಂಕ:08.06.2026. ಬದಲಾಗಿ ಮಾರಾಟ ಸೂಚನೆದಿನಾಂಕ:06.08.2026. ಎಂದು ಓದಿ.
ಇದನ್ನು ಹೊರತುಪಡಿಸಿ ಮಿಕ್ಕ ಎಲ್ಲಾ ನಿಯಮ ಮತ್ತು ಷರತ್ತುಗಳು ಬದಲಾಗುವುದಿಲ್ಲ.
ದಿನಾಂಕ:07.08.2026 ಸಹಿ/-ಮ್ಯಾನೇಜರ್ ಸ್ಥಾಪನೆಕ & ಅಧಿಕೃತ ಅಧಿಕಾರಿ
ಸ್ಥಳ-ಹುಬ್ಬಳ್ಳಿ ಬ್ಯಾಂಕ್ ಆಫ್ ಬರೋಡ

ಪೊಲೀಸ್ ಆಯುಕ್ತರ ಪ್ರಸ್ತಾವನೆಗೆ ಎನ್‌ಎಚ್‌ಎಐ ಅಸ್ತು | ಮಳೆ ಇಳಿದ ತಕ್ಷಣ ಶಾಶ್ವತ ಕಾಮಗಾರಿ

ಬಡೆಕೊಳ್ಳ ಮಠದ ಅಪಘಾತಗಳಿಗೆ ಬ್ರೇಕ್

ಸಂ.ಕ. ಸಮಾಚಾರ ಬೆಳಗಾವಿ

ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಬಡೆಕೊಳ್ಳಮಠ ಸಮೀಪ ಪದೇಪದೇ ಸಂಭವಿಸುತ್ತಿರುವ ಅಪಘಾತಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಬೆಳಗಾವಿ ನಗರ ಪೊಲೀಸ್ ಆಯುಕ್ತ ಭೂಷಣ್ ಬೋರಸೆ ನಡೆಸಿದ ಪ್ರಯತ್ನ ಇದೀಗ ನಿರ್ಣಾಯಕ ಹಂತ ತಲುಪಿದೆ.

ಅಪಘಾತ ಪೀಡಿತ ಈ ಪ್ರದೇಶದಲ್ಲಿ ಕೇವಲ ಸಂಚಾರ ನಿಯಂತ್ರಣ ಅಥವಾ ಎಚ್ಚರಿಕೆ ನೀಡುವುದರಿಂದ ಸಮಸ್ಯೆಗೆ ಪೂರ್ಣ ಪರಿಹಾರ ಸಾಧ್ಯವಿಲ್ಲ ಎಂಬ ಹಿನ್ನೆಲೆಯಲ್ಲಿ ಶಾಶ್ವತ ಸುರಕ್ಷತಾ ಕಾಮಗಾರಿ ಕೈಗೊಳ್ಳುವಂತೆ ಪೊಲೀಸ್ ಆಯುಕ್ತರ ಕಚೇರಿಯಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ (ಎನ್‌ಎಚ್‌ಎಐ) ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಅದಕ್ಕೆ ಸ್ಪಂದಿಸಿರುವ ಎನ್‌ಎಚ್‌ಎಐ ಟೆಂಡರ್‌ಪ್ರಕ್ರಿಯೆಯನ್ನೇಪೂರ್ಣಗೊಳಿಸಿದ್ದು, ಮಳೆ ಪ್ರಮಾಣ ಕಡಿಮೆಯಾದ ಕೂಡಲೇ ಕಾಮಗಾರಿ ಆರಂಭಿಸಲು ಸಿದ್ಧತೆ ಮಾಡಿಕೊಂಡಿದೆ.

ಅಪಘಾತ ಸಂಭವಿಸಿದ ಬಳಿಕ ಸ್ಥಳಕ್ಕೆ ತೆರಳಿ ಪ್ರಕರಣ ದಾಖಲಿಸುವುದು, ಸಂಚಾರ ಸುಗಮಗೊಳಿಸುವುದಕ್ಕೆ ಮಾತ್ರ ಪೊಲೀಸ್ ಕಾರ್ಯ ಸೀಮಿತವಾಗಬಾರದು; ಅಪಘಾತ ಮರುಕಳಿಸದಂತೆ ಸಂಬಂಧಪಟ್ಟ ಇಲಾಖೆಗಳ ಗಮನ ಸೆಳೆದು ಮೂಲಸೌಕರ್ಯ ಮಟ್ಟದಲ್ಲಿಯೇ ಪರಿಹಾರ ಕಂಡುಕೊಳ್ಳಬೇಕು ಎಂಬ ದೃಷ್ಟಿಯಿಂದ ಆಯುಕ್ತರು ವಿಷಯವನ್ನು ಎನ್‌ಎಚ್‌ಎಐ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಇದರ ಫಲವಾಗಿ ಬಹುಕಾಲದಿಂದ ಆತಂಕ ಮೂಡಿಸಿದ್ದ ಬಡೆಕೊಳ್ಳಮಠ ಭಾಗದಲ್ಲಿ ಈಗ ಶಾಶ್ವತ ಸುರಕ್ಷತಾ ಕಾಮಗಾರಿಗೆ ದಾರಿ ತೆರೆದಿದೆ.

ಮಳೆ ಮುಗಿಯುವವರೆಗೆ ಕಾಯಲ್ಲ...

ಶಾಶ್ವತ ಕಾಮಗಾರಿ ಮಳೆಯ ಕಾರಣದಿಂದ ತಕ್ಷಣ ಆರಂಭಿಸಲು ಸಾಧ್ಯವಾಗದಿದ್ದರೂ, ಅಲ್ಲಿಯವರೆಗೆ ಅಪಘಾತಗಳ ಅಪಾಯ ಹಾಗೆಯೇ ಬಿಟ್ಟುಕೊಡದಿರಲು ಪೊಲೀಸ್ ಇಲಾಖೆ ಮತ್ತು ಎನ್‌ಎಚ್‌ಎಐ ಮುಂದಾಗಿವೆ.

ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚಿರುವ ಹೆದ್ದಾರಿ ಭಾಗದಲ್ಲಿ ನೀರು ತುಂಬಿದ ಡ್ರಮ್, ಟ್ರಾಫಿಕ್ ಕೋನ್, ಪ್ರತಿಫಲಿತ ಮನುಷ್ಯಾಕೃತಿ ಹಾಗೂ ಎಚ್ಚರಿಕೆ ಸೂಚನಾ ಫಲಕ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ವಾಹನ ಚಾಲಕರು ಅಪಾಯದ ಪ್ರದೇಶ ತಲುಪುವ ಮೊದಲೇ ಎಚ್ಚರಗೊಳ್ಳುವಂತೆ ಈ ವ್ಯವಸ್ಥೆ ರೂಪಿಸಲಾಗುತ್ತಿದೆ.

ವಿಶೇಷವಾಗಿ ರಾತ್ರಿ ವೇಳೆ ಹಾಗೂ ಮಳೆಯ ಸಂದರ್ಭದಲ್ಲಿ ರಸ್ತೆ ಪರಿಸ್ಥಿತಿ ಸ್ಪಷ್ಟವಾಗಿ ಗೋಚರಿಸದೆ ಅಪಾಯ ಹೆಚ್ಚುವ ಸಾಧ್ಯತೆ ಇರುವುದರಿಂದ ಪ್ರತಿಫಲಿತ ಸುರಕ್ಷತಾ ಸಾಧನಗಳಿಗೆ ಒತ್ತು ನೀಡಲಾಗಿದೆ. ವಾಹನಗಳ ವೇಗ ನಿಯಂತ್ರಣ ಹಾಗೂ ಅಪಾಯದ ಪ್ರದೇಶದ ಬಗ್ಗೆ ಚಾಲಕರ ಗಮನ ಸೆಳೆಯುವುದು ತಾತ್ಕಾಲಿಕ ಕ್ರಮಗಳ ಪ್ರಾಧಾನ್ಯ ಉದ್ದೇಶವಾಗಿದೆ.

ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚಿರುವ ಹೆದ್ದಾರಿ ಭಾಗದಲ್ಲಿ ನೀರು ತುಂಬಿದ ಡ್ರಮ್.

> ಮಳೆ ಕಡಿಮೆಯಾದ ಬಳಿಕ ಶಾಶ್ವತ ಕಾಮಗಾರಿ ಆರಂಭವಾಗಲಿದೆ. ಅಲ್ಲಿಯವರೆಗೆ ಅಗತ್ಯ ತಾತ್ಕಾಲಿಕ ಸುರಕ್ಷತಾ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುವುದು. ಈ ಕ್ರಮಗಳಿಂದ ಮುಂದಿನ ದಿನಗಳಲ್ಲಿ ಅಪಘಾತಗಳ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆ ಮಾಡುವ ನಿರೀಕ್ಷೆ ಇದೆ.
>
> ■ ಭೂಷಣ್ ಬೋರಸೆ
> | ಪೊಲೀಸ್ ಆಯುಕ್ತ

ಸ್ಥಳದಲ್ಲೇ ಜಂಟಿ ನಿಗಾ...

ಈ ಸುರಕ್ಷತಾ ಕ್ರಮಗಳು ಕಾಗದದಲ್ಲೇ ಉಳಿಯದಂತೆ ಹಿರೇಬಾಗೇವಾಡಿ ಪೊಲೀಸ್ ಠಾಣೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಎನ್‌ಎಚ್‌ಎಐ ಅಧಿಕಾರಿಗಳೊಂದಿಗೆ ನಿರಂತರ ಸಮನ್ವಯ ಸಾಧಿಸುವ ಜವಾಬ್ದಾರಿ ನೀಡಲಾಗಿದೆ.

ಯಾವ ಭಾಗದಲ್ಲಿ ಎಚ್ಚರಿಕೆ ಫಲಕ ಅಗತ್ಯ, ಎಲ್ಲಿ ಟ್ರಾಫಿಕ್ ಕೋನ್ ಮತ್ತು ಡ್ರಮ್ ಅಳವಡಿಸಬೇಕು, ಅಪಘಾತದ ಅಪಾಯ ಹೆಚ್ಚಿರುವ ಪ್ರದೇಶಗಳಲ್ಲಿ ಸುರಕ್ಷತಾ ವ್ಯವಸ್ಥೆ ಸಮರ್ಪಕವಾಗಿದೆಯೇ ಎಂಬುದನ್ನು ಪರಿಶೀಲಿಸಿಕೊಂಡು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಮದುರ್ಗಕ್ಕೆ ಪ್ರವೀಣಾರಾಜೆ ಘೋಟಗೆ ಭೇಟಿ

ರಾಮದುರ್ಗ : ರಾಮದುರ್ಗದ ಅರಸು ಭಾವೆ ವಂಶದ ನೇತೃತ್ವದಲ್ಲಿ ರಾಮದುರ್ಗ ತಾಲೂಕು ಸೇರಿದಂತೆ ನರಗುಂದ ತಾಲೂಕಿನಲ್ಲಿ ಹಲವು ದೇವಸ್ಥಾನಗಳು ಆಸ್ತಿಗಳು ಇವೆ. ದೇವಸ್ಥಾನಗಳ ಹಾಗೂ ಇಲ್ಲಿರುವ ಆಸ್ತಿ ಅಭಿವೃದ್ಧಿ ಮಾಡುತ್ತೇವೆ ಎಂದು ಭಾವೆ ವಂಶದ ಕೊನೆಯ ಸುಪುತ್ರಿ ಪ್ರವೀಣಾರಾಜೆ ವಿಕ್ರಮ ಘೋಟಗೆ ಹೇಳಿದರು.

ನಗರದ ಹೊರವಲಯದಲ್ಲಿರುವ ಖಾಸಗಿ ಹೊಟೇಲ್‌ನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮಕ್ಕಳ ವ್ಯಾಸಂಗ ಸೇರಿದಂತೆ ವಿವಿಧ ಕಾರಣಗಳಿಂದ ಅಮೇರಿಕಾದಲ್ಲಿ ವಾಸವಾಗಿದ್ದೆವು. ಇನ್ನು ಮುಂದೆ ಪುನಾದಲ್ಲಿ ವಾಸವಾಗುತ್ತಿದ್ದೇವೆ. ಮೇಲಿಂದ ಮೇಲೆ ರಾಮದುರ್ಗ ನಗರಕ್ಕೆ ಭೇಟಿ ನೀಡಿ, ನಮ್ಮ ವಂಶಸ್ಥರ ನೇತೃತ್ವದಲ್ಲಿ ನಡೆದುಕೊಂಡು ಬರುತ್ತಿದ್ದ ಶ್ರೀ ವೆಂಕಟೇಶ್ವರ ದೇವಸ್ಥಾನದ ಅಭಿವೃದ್ಧಿ ಒಳಗೊಂಡು ಆಸ್ತಿಗಳು ಮತ್ತು ದೇವಸ್ಥಾನಗಳ ಪ್ರಗತಿಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

ರಾಮದುರ್ಗ ತಾಲೂಕಿನ ಬ್ರಿಟಿಷ್ ಕಾಲದ ಹಾಗೂ

ರಾಮದುರ್ಗ ಪಟ್ಟಣದಲ್ಲಿ ಐತಿಹಾಸಿಕ ಅರಸು ಮನೆತನದ ಕೊನೆಯ ಸುಪುತ್ರಿ ಪ್ರವೀಣಾರಾಜೆ ವಿಕ್ರಮ ಘೋಟಗೆ ಮಾತನಾಡಿದರು.

ನಮ್ಮ ವಂಶದ ಐತಿಹಾಸಿಕ ಪರಂಪರೆ ಬಿಂಬಿಸುವ ಪ್ರದೇಶಗಳನ್ನು ಅರಮನೆ, ಕೋಟೆ ವಿವಿಧ ಸ್ಥಳಗಳನ್ನು ವೀಕ್ಷಣೆ ಮಾಡಿದ್ದೇವೆ. ಮುಂಬರುವ ದಿನಗಳಲ್ಲಿ ಕ್ಷೇತ್ರದ ಐತಿಹಾಸಿಕ ಸ್ಥಳಗಳನ್ನು ಅಭಿವೃದ್ಧಿಗೆ ಶ್ರಮಿಸಿ, ಜನತೆಗೆ ಅನುವು ಮಾಡಿಕೊಡುವ ಉದ್ದೇಶ ಹೊಂದಿದ್ದೇವೆ ಎಂದರು. ಅರಸು ವಂಶದ ಸುಪ್ರತ್ರಿಯ ಪತಿ ವಿಕ್ರಮ ವಿವೇಕ ಘೋಟಗೆ, ಪುತ್ರಿ ಐಶ್ವರಾಜೆ ಘೋಟಕೆ, ಜನಪರ ಟ್ರಸ್ಟ್ ಅಧ್ಯಕ್ಷ ಸುಭಾಸ ಘೋಡಕೆ, ಟಿಪ್ಪು ಸುಲ್ತಾನ ಸಂಘಟನೆಯ ಅಲ್ತಾಫ ಜಹಗೀರದಾರ ಇತರರಿದ್ದರು.

ಕಳೆದುಹೋಗಿದ್ದ 57 ಮೊಬೈಲ್ ಪತ್ತೆ

ಬೆಳಗಾವಿ : ಇತ್ತೀಚಿನ ದಿನಗಳಲ್ಲಿ ಮೊಬೈಲ್ ಫೋನ್ ಬಳಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮೊಬೈಲ್ ಕಳೆದುಹೋಗುವ ಪ್ರಕರಣಗಳ ಸಂಖ್ಯೆಯೂ ಏರಿಕೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಸಿಇಐಆರ್ (CEIR) ಪೋರ್ಟಲ್ ಮೂಲಕ ಕಳೆದುಹೋದ ಮೊಬೈಲ್ ಪತ್ತೆಹಚ್ಚುವ ಕಾರ್ಯವನ್ನು ಪರಿಣಾಮಕಾರಿಯಾಗಿ ಕೈಗೊಂಡಿದೆ.

ಬೆಳಗಾವಿ ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ.ರಾಮರಾಜನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಆರ್.ಬಿ. ಬಸರಗಿ, ಅಥಣಿ ವಿಭಾಗದ ಡಿವೈಎಸ್‌ಪಿ ಪ್ರಶಾಂತ ಜಿ.ಮುನ್ನೋಳಿ ಅವರ ಮಾರ್ಗದರ್ಶನದಲ್ಲಿ ಹಾಗೂ ಅಥಣಿ ವೃತ್ತದ ಸಿಪಿಐ ಸಂತೋಷ ಹಳ್ಳೂರ ಅವರ ನೇತೃತ್ವದಲ್ಲಿ ವಿಶೇಷ ತಂಡವನ್ನು ರಚಿಸಿ ಕಾರ್ಯಾಚರಣೆ ನಡೆಸಲಾಗಿದೆ.

ತಂಡದಲ್ಲಿ ಪಿಎಸ್‌ಐ (ಕಾನೂನು ಮತ್ತು ಸುವ್ಯವಸ್ಥೆ) ಜಿ.ಎಸ್. ಉಪ್ಪಾರ ಹಾಗೂ ಪಿಎಸ್‌ಐ (ಅಪರಾಧ) ಮಲ್ಲಿಕಾರ್ಜುನ ತಳವಾರ ಪ್ರಮುಖ ಪಾತ್ರವಹಿಸಿದ್ದು, ಕಳೆದ ಎರಡು ವರ್ಷಗಳಲ್ಲಿ ಕಳೆದುಹೋದ ಮೊಬೈಲ್‌ಗಳನ್ನು ಹಂತ ಹಂತವಾಗಿ ಪತ್ತೆಹಚ್ಚಿ ವಾರಸುದಾರರಿಗೆ ಹಿಂದಿರುಗಿಸುವ ಕಾರ್ಯ ಯಶಸ್ವಿಯಾಗಿ ನಡೆಯುತ್ತಿದೆ. ಈ ಬಾರಿ 57 ಕಳೆದುಹೋದ ಮೊಬೈಲ್‌ಗಳನ್ನು ಪತ್ತೆಹಚ್ಚಿ, ಶುಕ್ರವಾರ ಅವುಗಳ ನೈಜ ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಇನ್ನೂ ಪತ್ತೆಯಾಗಬೇಕಿರುವ ಕಳೆದುಹೋದ ಮೊಬೈಲ್‌ಗಳನ್ನು ಶೋಧಿಸುವ ಕಾರ್ಯ ನಿರಂತರವಾಗಿ ಮುಂದುವರಿದಿದ್ದು, ಸಾರ್ವಜನಿಕರು ಮೊಬೈಲ್ ಕಳೆದುಹೋದ ತಕ್ಷಣ ಸಮೀಪದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ, ಸಿಇಐಆರ್ ಪೋರ್ಟಲ್ ಮೂಲಕ ಮಾಹಿತಿ ನೀಡುವಂತೆ ಪೊಲೀಸ್ ಇಲಾಖೆ ಮನವಿ ಮಾಡಿದೆ.

ಬೈಕ್-ಟ್ರಕ್ ಡಿಕ್ಕಿ: ಒರ್ವ ಸಾವು

ಯಕ್ಸಂಬಾ : ಗುರುವಾರ ಸಂಜೆ 7:30 ಕ್ಕೆ ಸಮೀಪದ ಸದಲಗಾ-ಬೋರಗಾಂವ ರಸ್ತೆ ಮಾರ್ಗದಲ್ಲಿ ಟ್ರಕ್ ಮತ್ತು ದ್ವಿಚಕ್ರ ವಾಹನದ ನಡುವೆ ನಡೆದ ಅಪಘಾತದಲ್ಲಿ ಜನವಾಡ ಗ್ರಾಮದ ವ್ಯಕ್ತಿಯೊಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಸಂಭವಿಸಿದೆ. ಸತೀಶ ಮಹಾದೇವ ಕೊಗಲೆ(50) ಎಂಬುವರೆ ಮೃತಪಟ್ಟಿದ್ದಾರೆ. ಸತೀಶ ಅವರು ತಮ್ಮ ಹೊಲದಿಂದ ಸಂಜೆ ಮನೆಗೆ ತನ್ನ ದ್ವಿಚಕ್ರ ವಾಹನದ ಮೂಲಕ ಹಿಂತಿರುಗುತ್ತಿದ್ದಾಗ ಲೋಕಾಪುರದಿಂದ ಇಚಲಕರಂಜಿಗೆ ಸಿಮೆಂಟ್ ಸಾಗಿಸುತ್ತಿದ್ದ ಟ್ರಕ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೆ ಸಾವನ್ನಪ್ಪಿದ್ದಾರೆ.

ಖಡಕಲಾಟದಲ್ಲಿ ಫೆಬ್ರವರಿಯಲ್ಲಿ ನಡೆದಿದ್ದ ಕೃತ್ಯ ಆರು ತಿಂಗಳ ಬಳಿಕ ಬೆಳಕಿಗೆ

ಅಕ್ರಮ ಸಂಬಂಧ; ಪತಿ ಕೊಂದ ಪತ್ನಿ

ಚಿಕ್ಕೋಡಿ: ಅಕ್ರಮ ಸಂಬಂಧಕ್ಕೆ ಪತಿ ಅಡ್ಡಿಯಾಗಿದ್ದನೆಂದು ಪ್ರಿಯಕರನೊಂದಿಗೆ ಸೇರಿ ಪತ್ನಿಯೇ ಪತಿಯನ್ನು ಭೀಕರವಾಗಿ ಕೊಲೆ ಮಾಡಿ, ಶವವನ್ನು ತಮ್ಮದೇ ಹೊಲದಲ್ಲಿ ಹೂತುಹಾಕಿ ಸಾಕ್ಷಿ ನಾಶ ಮಾಡಲು ಯತ್ನಿಸಿರುವ ಘಟನೆ ತಾಲೂಕಿನ ಖಡಕಲಾಟದಲ್ಲಿ ತಡವಾಗಿ ಬೆಳಕಿಗೆ ಬಂದಿದೆ.

ಫೆಬ್ರವರಿ 2026 ರಲ್ಲಿ ನಡೆದಿದ್ದ ಈ ಕೊಲೆ ಪ್ರಕರಣ ಇದೀಗ ಬಳಕೆಗೆ ಬಂದಿದೆ. ಕೊಲೆಯಾದವನನ್ನು ರಾಘು ಸಿದ್ದಪ್ಪ ಗಾವಡೆ(38) ಎಂದು ಗುರುತಿಸಲಾಗಿದೆ. ಕೊಲೆ ಮಾಡಿದ ಆರೋಪಿಗಳನ್ನು ಬಂಗಾರಿ ರಾಘು ಗಾವಡೆ(32) ಹಾಗೂ ನಿಪ್ಪಾಣಿ ತಾಲೂಕಿನ ಬೇನಾಡಿ ಗ್ರಾಮದ ರಾಮಾ ಮಾಯಪ್ಪಾ ರಾಣಗೆ(40) ಎಂದು ಗುರುತಿಸಲಾಗಿದೆ.

ಖಡಕಲಾಟದ ವಡ್ಡರ ಕೊರವಿ ಗಲ್ಲಿಯ ಬಳಿ ರಾಘು ತನ್ನ ಕುಟುಂಬದೊಂದಿಗೆ ವಾಸವಿದ್ದ. ಈತನಿಗೆ ವಿಪರೀತ ಮದ್ಯಪಾನದ ಚಟವಿತ್ತು. ಕುಡಿದ ಮತ್ತಿನಲ್ಲಿ 15 ದಿನ, ಒಂದು ತಿಂಗಳ ಕಾಲ ಮನೆಗೆ ಬರುತ್ತಿರಲಿಲ್ಲ. ಇದೇ ವೇಳೆ ರಾಘುವಿನ ಪತ್ನಿ ಭಂಗಾರಿ ರಾಘು ಗಾವಡೆ(32) ಹಾಗೂ ಆಕೆಯ ಗಂಡನ ಸೋದರಮಾವನ ಮಗ(ಬೇನಾಡಿ ಗ್ರಾಮದ) ರಾಮಾ ಮಾಯಪ್ಪ ರಾನಗೆ(40) ನಡುವೆ ಅಕ್ರಮ ಸಂಬಂಧ ಬೆಳೆದಿತ್ತು.

ಪತಿ ಮನೆಯಲ್ಲಿ ಇಲ್ಲದಾಗ ರಾಮಾ ಆಗಾಗ ಮನೆಗೆ ಬರುತ್ತಿದ್ದ. ಪತಿ ಇದ್ದಾಗ ಈ ವಿಚಾರಕ್ಕೆ ಗಂಡ-ಹೆಂಡತಿ ನಡುವೆ ದೊಡ್ಡ ಮಟ್ಟದ ಜಗಳವಾಗುತ್ತಿತ್ತು. ತಮ್ಮ ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ರಾಘುವನ್ನು ಮುಗಿಸಲು ಇಬ್ಬರೂ ಸೇರಿ ಸಂಚು ರೂಪಿಸಿದ್ದರು.

ತಮ್ಮ ಹಾದಿಗೆ ಅಡ್ಡಿಯಾಗಿದ್ದ ರಾಘುವನ್ನು ಮುಗಿಸಲು ನಿರ್ಧರಿಸಿದ ಬಂಗಾರಿ ಹಾಗೂ ರಾಮಾ, ಫೆಬ್ರವರಿ 2026 ರ ರಾತ್ರಿ ರಾಘುವಿಗೆ ವಿಪರೀತ ಮದ್ಯ ಕುಡಿಸಿದ್ದಾರೆ. ಆತ ಮದ್ದದ ಅಮಲಿನಲ್ಲಿದ್ದಾಗ ಬೈಕ್ ಮೇಲೆ ಕೂರಿಸಿಕೊಂಡು ಖಡಕಲಾಟ-ಅಕೋಳ ಮಾರ್ಗದ ಘಾಟ್ಗೆ ತೋಟದ ಬಳಿ ಇರುವ ತಮ್ಮ ಹೊಲಕ್ಕೆ ಕರೆದೊಯ್ದಿದ್ದಾರೆ. ಅಲ್ಲಿ ಆತನ ಕತ್ತು ಹಿಸುಕಿ ಕೊಲೆ ಮಾಡಿ, ಹೊಲದಲ್ಲೇ ಗುಂಡಿ ತೋಡಿ ಶವ ಹೂತುಹಾಕಿದ್ದಾರೆ. ಬಳಿಕ ಏನೂ ನಡೆದಿಲ್ಲವೆಂಬಂತೆ ನಾಟಕವಾಡಿದ್ದರು.

ಘಟನೆ ನಡೆದ ಫೆಬ್ರವರಿಯಲ್ಲಿಯೇ ಖಡಕಲಾಟ ಪೊಲೀಸ್ ಠಾಣೆಗೆ ತೆರಳಿದ್ದ ಪತ್ನಿ ಬಂಗಾರಿ, ತನ್ನ ಗಂಡ ನಾಪತ್ತೆಯಾಗಿದ್ದಾನೆ, ಕುಡಿತದ ಚಟವಿದ್ದಿದ್ದರಿಂದ ಆಗಾಗ ಹೀಗೆಯೇ ಮನೆ ಬಿಟ್ಟು ಹೋಗುತ್ತಿದ್ದ ಎಂದು ಸುಳ್ಳು ದೂರು ನೀಡಿದ್ದಳು. ಪೊಲೀಸರು ಕೂಡ ಇದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ.

ಕೊಲೆಗೀಡಾದ ರಾಘು ಗಾವಡೆ

ಆರೋಪಿ ಬಂಗಾರಿ ಗಾವಡೆ

ಆರೋಪಿ ರಾಮಾ ರಾನಗೆ

ಆದರೆ, ಆರು ತಿಂಗಳಾದರೂ ರಾಘುವಿನ ಸುಳಿವು ಸಿಗದಿರುವುದು ಹಾಗೂ ಸಮಾಜದ ಯಾವುದೇ ಶುಭಕಾರ್ಯಗಳಲ್ಲೂ ಆತ ಕಾಣಿಸಿಕೊಳ್ಳದಿರುವುದನ್ನು ಗಮನಿಸಿದ ಸಂಬಂಧಿಕರಿಗೆ ಅನುಮಾನ ಶುರುವಾಗಿದೆ. ಅವರು ಬಂಗಾರಿಯನ್ನು ತೀವ್ರವಾಗಿ ವಿಚಾರಿಸಿದ್ದಾರೆ. ಆರಂಭದಲ್ಲಿ ಆಕೆತನಗೆಗೊತ್ತಿಲ್ಲಎಂದುನಾಟಕವಾಡಿದ್ದಾಳೆ. ಸಂಬಂಧಿಕರು ತೀವ್ರ ಒತ್ತಡ ಹೇರಿದಾಗ, "ಜಗಳ ಬಿಡಿಸುವಾಗ ಆಕಸ್ಮಿಕವಾಗಿ ಆತನ ಮರ್ಮಾಂಗಕ್ಕೆ ಪೆಟ್ಟಾಗಿ ಮೃತಪಟ್ಟ, ಹೆದರಿಕೆಯಿಂದ ಹೊಲದಲ್ಲಿ ಹೂತುಹಾಕಿದೆ" ಎಂದು ಸುಳ್ಳು ಕಥೆ ಕಟ್ಟಿದ್ದಾ